


ಈ ಕಾಲದ ಕಥನ

# ಕಥೆಗಳ ಮಾರಾಣಿ ಐರಾವತಿ...

**ಎನ್. ಸಂಧ್ಯಾರಾಣಿ**

ಜಗತ್ತಿನ ಮೊಟ್ಟಮೊದಲ ಕಥೆ ಎಲ್ಲಿ ಹುಟ್ಟಿತು? ಒಲ್ಲದ ಕಂದನನ್ನು ಒಲಿಸುತ್ತಾ, ಅನ್ನಕಿವುಚಿ, ತುಪ್ಪ ಬೆರೆಸಿ, ಇಷ್ಟೇ ಇಷ್ಟು ತಿಳಿಸಾರು ಹಾಕಿ ಅಮ್ಮ ಕಲೆಸಿದ ಬೆಣ್ಣೆತುತ್ತಿನಲ್ಲಿ, ತಡವಾಯಿತೆಂದು ಮುನಿದ ಗೆಳತಿಯನ್ನು ಅನುನಯಿಸಲು ಹುಡುಗ ಹೇಳಿದ ಹೊಸಸುಳ್ಳಿನೊಂದಿಗೆ, ಗೆಳೆಯನೊಡನೆ ಸಮಯ ಕಳೆದು ಬಂದ ಹುಡುಗಿ ತನ್ನ ಗೆಳತಿಯ ಮುಂದೆ ಕೂತು ನಸುನಾಚಿಕೆಯಲ್ಲಿ 'ಹೇಗೆ ಹೇಳಲಿ ಹೇಳೆ ಈ ಮಧುರ ಅನುಭವವ, ಕಲ್ಪವೃಕ್ಷದ ಹಣ್ಣು ಇಳಿದ ರುಚಿಯಾ' ಎನ್ನುವ ನಾಚಿಕೆಯಲ್ಲಿ – ಎಲ್ಲಿ ಹುಟ್ಟಿತು? ಗೊತ್ತಿಲ್ಲ, ಆದರೆ ನನ್ನ ಪಾಲಿನ ಕತೆಗಳೆನ್ನುವ ಮಾರಾಣಿ ಹರಿದದ್ದು ಬಾಲ್ಯದಲ್ಲಿ. ಧಗಧಗ ಉರಿಯುತ್ತಿದ್ದ ನೀರೊಲೆ ಎದುರಲ್ಲಿ ಕೂತು ಅಜ್ಜ ಹೇಳುತ್ತಿದ್ದ ಕತೆಯಲ್ಲಿ. ಆಮೇಲೆ ಅಪ್ಪ ಕತೆ ಹೇಳುತ್ತಿದ್ದರು. ಅಕ್ಷರ ಕಲಿತದ್ದರಿಂದ ನನಗಾದ ದೊಡ್ಡ ಅನುಕೂಲ ನನಗೆ ಪುಸ್ತಕಲೋಕಕ್ಕೆ ಪ್ರವೇಶ ದೊರಕಿದ್ದು. ಚಂದಮಾಮ, ಬಾಲಮಿತ್ರದಿಂದ ಶುರುವಾದ ಪಯಣ ತ್ರಿವೇಣಿ, ಅನುಪಮಾ ನಿರಂಜನ, ಗೃಹಭಂಗ, ಯಂಡಮೂರಿ, ನಿರಂಜನ, ತೇಜಸ್ವಿ, ಕುವೆಂಪು, ಬೇಂದ್ರೆ, ಚಿತ್ತಾಲ, ಸಿಡ್ನಿ ಶೆಲ್ಡನ್, ಅಯಾನ್ ರಾಂಡ್, ಪ್ರೇಮ್‌ಚಂದ್, ಪಿ. ಸಾಯಿನಾಥ್, ಖುಷ್ವಂತ್ ಸಿಂಗ್, ಲೋಹಿಯಾ, ಲಂಕೇಶ್, ಮಿಲನ್ ಕುಂದೆರಾ, ಚಿನುವಾ ಅಚಿಬೆ... ಇಂದಿಗೂ ನನ್ನ ಪಯಣ ನಿಂತಿಲ್ಲ. ಕಥೆಗಳು ಅಂದಿನಿಂದ ಇಂದಿನವರೆಗೂ ನನ್ನನ್ನು ಪೊರೆಯುತ್ತಲೇ ಬಂದಿವೆ. ಮೌನವನ್ನು ಪ್ರೀತಿಸಲು ಕಲಿಸಿವೆ, ಒಂಟಿತನವನ್ನು ಏಕಾಂತವಾಗಿಸಿಕೊಳ್ಳುವುದನ್ನು ಕಲಿಸಿವೆ, ಬದುಕಿನ ಯಾವುದೋ ಸಿಕ್ಕನ್ನು ಮತ್ತ್ಯಾವುದೋ ಪಾತ್ರ ಬಿಡಿಸಿದೆ, ಬದುಕು ನೀಡಿ ಹೋದ ಪ್ರಶ್ನೆಗೆ ಉತ್ತರ ಇನ್ಯಾವುದೋ ಕಥೆಯಲ್ಲಿ ಸಿಕ್ಕಿದೆ. ಇಷ್ಟಕ್ಕೂ ಕಥೆ ಎಂದರೇನು? ಅಜ್ಜಿಕತೆ, ಹರಿಕತೆ, ರಾಮಾಯಣ, ಮಹಾಭಾರತ, ಮಂಟೆಸ್ವಾಮಿ, ಭಾಗವತ, ಗದುಗಿನ ಭಾರತ ಇವೆಲ್ಲವೂ ನಾವು ಕಂಡ ಕಥೆಗಳ ಮೊದಲ ಪುಟಗಳು. ಸುತ್ತಲೂ ಮಕ್ಕಳನ್ನು